



ಗೋವುಗಳು ಸಿಕ್ಕಿಹಾಕಿಕೊಂಡ ಸ್ಥಳಕ್ಕಿಳಿದು ಅವುಗಳಿಗೆ ಹಿಂಡಿ ಕೊಟ್ಟು, ನೀರು ಕುಡಿಸುತ್ತಿರುವ ಸದಸ್ಯರು

ಇದೆಲ್ಲವೂ ಶುರುವಾದುದು, ವಳಕಲ್ಲಿಗೆ ಹೊಂದಿಕೊಂಡಿರುವ ಐತಿಹಾಸಿಕ ಹುಲಿಕೆರೆಯಲ್ಲಿ ಮೀನು ಹಿಡಿಯಲು ಹೋದ ಶುಕೂರ್ ಮತ್ತು ಇಬ್ರಾಹಿಂ ಅವರಿಗೆ ದೂರದ ಕಣಿವೆಯಲ್ಲಿ ಯಾವುದೋ ಪ್ರಾಣಿಗಳು ಕಾಣಿಸುವ ಮೂಲಕ. ಅವು ಗೋವುಗಳಿರಬಹುದೇ ಎನ್ನುವ ಶಂಕೆಯೊಂದಿಗೇ, ಮೀನುಶಿಕಾರಿ ಮುಗಿಸಿಕೊಂಡು ಸಂಜೆ ಮನೆಗೆ ಮರಳಿದರು. ಮಾರನೇದಿನ ಮತ್ಸ್ಯಬೇಟೆಗೆ ಬಿಡುವು ಕೊಟ್ಟು ಬೆಟ್ಟ ಹತ್ತಿದಾಗ, ಇಳಿಜಾರಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ನಾಲ್ಕು ಹಸುಗಳು ಗ ಅವರ ಕಣ್ಣಿಗೆ ಸ್ಪಷ್ಟವಾಗಿ ಗೋಚರಿಸಿದವು.

ಗೋವುಗಳು ಇಳಿಜಾರಿನಲ್ಲಿ ಬಂದಿಯಾದ ವಿಷಯವನ್ನು ಶುಕೂರ್ ಮತ್ತು ಇಬ್ರಾಹಿಂ ಗೋಶಾಲೆಯವರಿಗೆ ಮುಟ್ಟಿಸಿದರು. ಮುಂದಿನದು 'ಆಪರೇಷನ್ ಗೋರಕ್ಷಣೆ'.

ಬೆಟ್ಟದ ಮೇಲಿನಿಂದ, ಗೋವುಗಳನ್ನು ಪ್ರಪಾತದಿಂದ ಸುರಕ್ಷಿತ ಜಾಗಕ್ಕೆ ಸಾಗಿಸುವುದು ಸುಲಭದ ಮಾತಾಗಿರಲಿಲ್ಲ. ಈ ಕಠಿಣ ಕಾರ್ಯಾಚರಣೆಗಾಗಿ ದಿಡ್ಡಿಕೇರಿ ಓಣಿಯ ಮಹ್ಮದ್ ಮಸೂದ್, ಇಬ್ರಾಹಿಂ, ಸುಹೇಲ್, ಗುಲಾಬ್, ಆಬೀದ್, ಸಮೀರ್, ಅಗ್ಗಾಲು ಸೇರಿದಂತೆ 20 ಜನರ ತಂಡವನ್ನು ಶುಕೂರ್ ರಚಿಸಿದರು. ಗೋಶಾಲೆಯ ರಾಹುಲ್ ಯಾದವ್ ಮತ್ತವರ ತಂಡದ ಹನುಮೇಶ್, ಕೊಟ್ರೇಶ್, ಸೂಗಪ್ಪ, ಜಯಪ್ಪ, ಜಯಪ್ರಕಾಶ, ಡಾ. ಶಂಕ್ರಪ್ಪ, ಬಸವರಾಜ್ ಅವರೂ ತಂಡದ ಜೊತೆಗಿದ್ದರು. ಹಗ್ಗ, ಗೂಟ, ನೀರು, ಹಿಂಡಿಗಳ ಸಂಗ್ರಹವೂ ನಡೆಯಿತು.

ನಾಲ್ಕು ಹಸುಗಳು ಪ್ರಪಾತದಲ್ಲಿ ಸಿಲುಕಿಕೊಂಡಿದ್ದು ಕಳೆದ ಮೇ 26ರಂದು. ಗೋಶಾಲೆ ಮತ್ತು ದಿಡ್ಡಿಕೇರಿ ಯುವಕರ ತಂಡದ ಕಾರ್ಯಾಚರಣೆ ನಡೆದದ್ದು ಮೇ 31ರಂದು.

ಕೊಪ್ಪಳದ 'ಮಹಾವೀರ ಗೋಶಾಲೆ'ಯ ಹಸುಗಳವು. ಗೋಶಾಲೆಯಲ್ಲಿ 900ಕ್ಕೂ ಹೆಚ್ಚು ಗೋವುಗಳಿವೆ. ಸೂರ್ಯೋದಯಕ್ಕೂ ಮುನ್ನವೇ ನಾಲ್ವರು ದನಗಾಹಿಗಳು ಗೋಶಾಲೆಯ ಎಲ್ಲ ಗೋವುಗಳನ್ನು ವಳಕಲ್ಲು ಪ್ರದೇಶಕ್ಕೆ ಮೇಯಲು ಕರೆದುಕೊಂಡು ಹೋಗುತ್ತಾರೆ. ವಳಕಲ್ಲು ಬೆಟ್ಟಸಾಲಿನ ಪ್ರದೇಶ. ಶಿಲಾಯುಗದಲ್ಲಿ ಮಾನವ ಅಲ್ಲಿ ವಾಸವಾಗಿದ್ದ



ಗೋವಿಗೆ ಹಗ್ಗ ಕಟ್ಟಿ ಮೇಲೆಳೆಯುತ್ತಿರುವ ತಂಡದ ಸದಸ್ಯರು



ರಕ್ಷಣಾ ಕಾರ್ಯದಲ್ಲಿ ಸಣ್ಣಪುಟ್ಟ ಗಾಯಗಳೊಂದಿಗೆ ಮೇಲೆ ಬಂದ ಗೋವು